(iii) From Governor's Defence Fund for building an extension to rehabilitate dependents of Jawans Ex-Servicemen in 1972. ,, 30,000

(7) For equipment for depends of Jawan and Ex-Serviceman in 1973. ... ,, 25,000

(8) From reseres of Special Committee for Welfare of armed forces personnel for Training cost of depends of Jawans and Ex-Servicemen in 1973. ... ,, 10,000

ಶ್ರೀ ಎಂ. ಎಸ್. ಕೃಷ್ಣನ್:—೭೫ ರೂಪಾಯಿಗಳ ಜೊತೆಗೆ ೧೫ ರಿಂದ ೦೨೦ ರೂಪಾಯಿಗಳ ವರೆಗೂ ಇನ್‌ಸೆಂಟಿವ್ ಕೊಡುವುದಾಗಿ ಹೇಳಿದರು ಕಡಿಮೆ ಎಂದರೆ ತಿಂಗಳಿಗೆ ಒಟ್ಟು ೯೦ ರೂಪಾಯಿ ಬರುತ್ತದೆ. ಬೆಂಗಳೂರು ನಗರದಲ್ಲಿ ಇದು ತೀರ ಕಡಿಮೆಯಾಗುತ್ತದೆ. ಆದ್ದರಿಂದ ಐದನೇ ಒಂದು ಭಾಗ ಎನ್ನುವುದನ್ನು ಜಾಸ್ತಿ ಮಾಡಬೇಕೆಂದು ಕೇಳಿದ್ದಾರೆಯೇ? ಹಾಗೆ ಕೇಳಿದ್ದರೆ ಅಪಕ್ಕೆ ಏನಾದರೂ ಪರಿಹಾರ ಕೊಡುತ್ತೀರಾ?

ಶ್ರೀ ಎ. ಶಂಕರ ಆಳ್ವ.—ಅವರು ಹೆಚ್ಚು ಜನರಿದ್ದಾರೆ. ಅದರ ಬಗ್ಗೆ ಆಲೋಚನೆ ಮಾಡ ಬೇಕೆಂದಿದ್ದೇನೆ ೭೫ ರೂಪಾಯಿ ಗ್ಯಾರಂಟಿಯಾಗಿ ಕೊಡಲಾಗುತ್ತದೆ ಮತ್ತು ನಾನು ಆಗಲೇ ಹೇಳಿದ ಹಾಗೆ ೧೫ ರಿಂದ ೦೨೦ ರೂಪಾಯಿಗಳವರಿಗೂ ಇನ್‌ಸೆಂಟಿವ್ ವೇಜಸ್ ಬರುತ್ತದೆ. ಕೆಲವರಿಗೆ ತಿಂಗಳಿಗೆ ೫೦೦ ರೂಪಾಯಿವರೆಗೂ ಬರುತ್ತದೆ ಮತ್ತೆ ಅವರಿಗೆ ಕೆಲವಾರು ಅಮೆಂಟಿಸ್ ಒದಗಿಸಿಕೊಟ್ಟಿದ್ದೇನೆ.

LOAN TO EX-MINISTERS; OF STATE AND DEPUTY MINISTERS FOR PURCHASE OF CARS

258. SRI G. PUTTASWAMY (Mudigere).—

Will the Chief Minister be pleased to state.—

(*a*) whether the Goverament had sanctioned loans to the Ex-Ministers, Ministers of State and Deputy Ministers to purchase cars during the year 1967 to 1971.

(*b*) if so the names of Ministers, Minister of state and Deputy Ministers to whome such loan was sanctioned.

(*c*) whether the said loan was recovered from them before they laid down their office.

(*d*) if so, the number of instalments in which the loan amount was recovered.

(*e*) if not, the action taken to recover the loan amount?

SRI D. DEVARAJ URS (Chief Minister).—

(*a*) No.

(*b*) to (*c*) Does not arise in view of (*a*)

ಶ್ರೀ ಜಿ. ಪುಟ್ಟಸ್ವಾಮಿ.—ಮಂತ್ರಿಗಳಾಗಿದ್ದವರಿಗೆ ಹಿಂದೇನಾದರು ಕಾರುಗಳನ್ನು ತೆಗೆದಕೊಳ್ಳುವುದಕ್ಕೆ ಸಾಲವನ್ನು ಕೊಟ್ಟಿದೆಯೇ?

ಶ್ರೀ ಡಿ. ದೇವರಾಜ ಅರಸ್ —ಮಂತ್ರಿಗಳಿಗೆ, ಮಾಜಿ ಆಗಲೀ, ಹಾಲಿ ಆಗಲಿ, ಭಾವಿ ಆಗಲಿ ಯಾರಿಗೂ ಸಹ ಸಾಲ ಕೊಡುವುದಕ್ಕೆ ಕಾನೂನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಾನೂನಿಲ್ಲದೆ ಬೇರೆ ರೀತಿ ಕೊಟ್ಟಿದ್ದಾರೆಯೇ ಸ್ವಾಮಿ?

ಶ್ರೀ ಡಿ. ದೇವರಾಜ ಅರಸ್,—ಬೇರೆ ರೀತಿಯಲ್ಲಿ ಕೊಟ್ಟಿದ್ದರೆ ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಹೇಳಲಿ.

LIFT IRRIGATION ON RIVER KUMUDVATI

284. Sri S. M. Sheernaly Chandrasekhar (Hosanagar).—

Will the Minister for Pablic Works and Electricity be pleased to state.—

(*a*) whether Government is aware that about seventy-two villages of Shimoga taluk are brought stricken as they are situated in river shadow belt.—

(*b*) whether it is not a fact that repeated requests were made by the pubilc of that area to sanction lift irregation scheme at the river "Kumudvati".

(*c*) if so, the action taken by Government in this regard ?

Sri H. M. Channabasappa (Minister for Public Works and Electricity).—

(*a*) No.

(*b*) Yes

(*c*) Investigations have been conducted for two L I. Schemes to benifit.

(1) Settikere and Vederakoppa villages, and

(2) Ayanur, Haranahalli and Kumsi Hobli respectively and the sehemes are found to be infeasible.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ —ನನ್ನ ಆ ಪ್ರಶ್ನೆಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಇದನ್ನು ವರಿಫೆ ಮಾಡಿ ಉತ್ತರ ಕೊಟ್ಟಿದ್ದಾರೆಯೇ ಹೇಗೆ ಸ್ವಾಮಿ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಕೇಳಿರತಕ್ಕ ರೀತಿಯಲ್ಲಿ ಇಲ್ಲ ಆ ಪ್ರದೇಶದಲ್ಲಿ ತುಂಗ ಮತ್ತು ಭದ್ರ ನಾಲೆಗಳಿಂದ ಅನುಕೂಲವಾಗುವ ಪ್ರದೇಶ ಬಿಟ್ಟು ೬೬ ಗ್ರಾಮಗಳಿವೆ. ಅದು ಕಸಬಾ ಒಂದನೇ ಸರ್ಕಲ್‌ನಲ್ಲಿ ೧೭ ಗ್ರಾಮ, ಎರಡನೇ ಸರ್ಕಲ್‌ನಲ್ಲಿ ೧೪ ಗ್ರಾಮ ಹೊಳೆ ಹೊನ್ನೂರು ಒಂದನೇ ಸರ್ಕಲ್‌ನಲ್ಲಿ ೧೨ ಗ್ರಾಮ, ಎರಡನೇ ಸರ್ಕಲ್‌ನ ೯ ಗ್ರಾಮ ಹಾರ್ನಹಳ್ಳಿ ಸರ್ಕಲ್ ೧೪ ಗ್ರಾಮ. ಈ ೬೬ ಗ್ರಾಮಗಳು ಆಲೆಗಳಿಂದ ಹೊರಗೆ ಇರತಕ್ಕ ಊರುಗಳು ಆ ಊರುಗಳಲ್ಲಿ ಎರಡು ವರ್ಷದಲ್ಲಿ ಮಾತ್ರ ೧೯೫೮-೫೯ರಲ್ಲಿ ಮತ್ತು ೧೯೬೦-೬೧ ರಲ್ಲಿ ಆಲ್ಪಾಣಿಗಿಂತ ಬೆಳೆ ಕಡಮೆಯಾಗಿ ಕಂದಾಯ ರಿಮಿಷನ್ ಕೊಟ್ಟಿದೆ ೧೯೬೮-೬೮ನೇ ಇಸವಿಯಲ್ಲಿ ೪೦ ಗ್ರಾಮಗಳಿಗೆ ಮತ್ತು ೧೯೭೦ ೭೧ರಲ್ಲಿ ೪೬ ಗ್ರಾಮಗಳಿಗೆ ಕಂದಾಮ ರಿಮಿಷನ್ ಕೊಟ್ಟಿರುವುದು. ಇದ್ನು ೧೯೬೫-೬೬ರಲ್ಲಿ ೩೫ ಗ್ರಾಮಗಳಿಗೆ ಕಂದಾಯ ಸಸ್ಪೆಂಷ್ ಮಾಡಿದ್ದಾರೆ. ಇಷ್ಟಲ್ಲದೆ ಸಾಮಾನ್ಯವಾಗಿ ಸಸ್ಪೆಂಷ್ ಅಲ್ಲಿ ಬೆಳೆಯಾಗುತ್ತಿದೆ ಎಂದು ಸರ್ಕಾರಕ್ಕೆ ವರದಿ ಬಂದಿದೆ.